## ಕಥೆ

ಸ್ಮಿತಾ, ಸ್ಮಿತಾ ಶರ್ವಾಣಿ. ನನಗೆ ಫ್ಲೈಟ್ ಇರೋದು ರಾತ್ರಿ ಎಂಟು ಗಂಟೆಗೆ. ಹಾಗಾಗಿ ಅರ್ಧಗಂಟೆ ನಿಮ್ಮೊಂದಿಗೆ ಮಾತನಾಡಲು ಅಭ್ಯಂತರವೇನಿಲ್ಲ, ನಾನೀಗ ಬರಬಹುದಾ' ಅವಳ ಮಾತುಗಳಲ್ಲಿ ಖಚಿತತೆ ಇತ್ತು. 'ಓಹ್, ಖಂಡಿತಾ ಬನ್ನಿ. ನೀವಿರುವಲ್ಲಿಗೆ ಕಾರನ್ನು ಕಳುಹಿಸುತ್ತೇನೆ. ಮತ್ತು ನೀವು ಇಲ್ಲೇ ಲಂಚ್ ಮುಗಿಸಿಕೊಂಡು ಹೋಗಬೇಕು' ಒಮ್ಮೆಲೇ ಅವನ ಧ್ವನಿಯಲ್ಲಿ ಉತ್ಸಾಹ ಪುಟಿದದ್ದು ಅವಳ ಗಮನಕ್ಕೆ ಬಂದಿತ್ತು. 'ನೀವು ಕಾರನ್ನೇನು ಕಳುಹಿಸುವುದು ಬೇಡ, ಇನ್ನೊಂದರ್ಧ ಗಂಟೆಯಲ್ಲಿ ಬಂದುಬಿಡುತ್ತೇನೆ' ಎಂದವಳ ಮಾತಿಗೆ 'ಪ್ಲೀಸ್ ಕಮ್, ಕಾಯುತ್ತಿರುತ್ತೇನೆ' ಖುಷಿ ತುಂಬಿತ್ತು ಅವನ ಮಾತುಗಳಲ್ಲಿ.

ಅವಳು ಟ್ಯಾಕ್ಸಿ ಇಳಿದು ಸಿದ್ಧಾರ್ಥ ಗ್ರೂಪ್ ಆಫ್ ಕಂಪನೀಸ್ ಗೇಟ್ ಮುಂದೆ ನಿಂತ ಕೂಡಲೇ ಸೆಕ್ಯುರಿಟಿ ಚೀಫ್ ಬಂದು ಅವಳನ್ನು ಬರಮಾಡಿಕೊಂಡು ಸಿದ್ಧಾರ್ಥನ ಚೇಂಬರಿಗೆ ಕರೆದೊಯ್ದಿದ್ದ. ವಿಶಾಲವಾದ ಚೇಂಬರ್ ಮೌನದಲ್ಲಿ ಮುಳುಗಿದಂತಿತ್ತು. 'ವೆಲ್ ಕಮ್' ಎಂದು ಕೈಕುಲುಕಿ ಸ್ವಾಗತಿಸಿದ್ದ. ತಣ್ಣನೆಯ ವಾತಾವರಣದಲ್ಲಿ ಚೇಂಬರ್ ತುಂಬಾ ಅವಳು ಹಾಕಿದ್ದ ಪರ್ಫ್ಯೂಮ್‌ನ ಸುವಾಸನೆಯೇ ದಟ್ಟವಾಗಿ ಹರಡಿಕೊಂಡಿತ್ತು. ಅವಳು ವಿಸ್ಮಯದಿಂದ ಮುಖವರಳಿಸುವುದಕ್ಕೂ ಅವನು ನಕ್ಕು 'ಫೆರಾರಿ ರೆಡ್, ನಿಮ್ಮ ಫೇವರಿಟ್' ಎಂದದ್ದಕ್ಕೂ ಒಂದೇ ಆಗಿತ್ತು. ನಗು, ನಾಚಿಕೆಯ ಬೆಸುಗೆಯಿಂದ ಅವಳ ಮುಖ ಕೆಂಪಡರಿತ್ತು. 'ಓಹ್, ಫೆಂಟಾಸ್ಟಿಕ್. ವ್ಹಾಟ್ ಎ ಪ್ಲೆಸೆಂಟ್ ಅಟ್ಮಾಸ್ಫಿಯರ್' ಎನ್ನುತ್ತಾ ಎದುರು ಕೂತವಳ ಕಣ್ಣಲ್ಲಿ ಕಣ್ಣಿಟ್ಟು 'ಮೊನ್ನೆ ರಾತ್ರಿ ನನಗೊಂದು ವಿಚಿತ್ರವಾದ ಕನಸು ಬಿತ್ತು. ಹಾಗೆ ನೋಡಿದರೆ ನನಗೆ ಕನಸು ಬೀಳುವುದೇ ತುಂಬಾ ಅಪರೂಪ. ಕನಸಿನಿಂದಾಗಿ ಎಚ್ಚರವಾದಾಗ ರಾತ್ರಿ ಮೂರು ಗಂಟೆ. ಮತ್ತೆ ನನಗೆ ನಿದ್ದೆ ಆವರಿಸಿದ್ದು ಬೆಳಗ್ಗೆ ಆರು ಗಂಟೆಗೆ. ನಿನ್ನೆ ದಿನಪೂರ್ತಿ ಯಾವ ಕೆಲಸದಲ್ಲೂ ತೊಡಗಿಸಿಕೊಳ್ಳಲಾಗಲಿಲ್ಲ' ಅಟೆಂಡರ್ ಎರಡು ಗ್ಲಾಸುಗಳಲ್ಲಿ ಫ್ರೆಶ್ ಲೈಮ್ ಜ್ಯೂಸ್ ಹಿಡಿದು ಬಂದಿದ್ದರಿಂದ ಮಾತು ನಿಲ್ಲಿಸಿದ.

ಅಟೆಂಡರ್ ಹೊರಹೋಗುತ್ತಲೇ 'ಆ ಕನಸಿನಲ್ಲಿ ನೀವೂ ಇದ್ದಿರಿ' ಎನ್ನುತ್ತಾ ಜ್ಯೂಸ್ ಗ್ಲಾಸಿಗೆ ಕೈ ಹಾಕಿದ. ಅವಳೂ ಕಾಲು ಗ್ಲಾಸ್ ಜ್ಯೂಸ್ ಕುಡಿದು 'ವ್ವಾವ್, ವೆರಿ ಇಂಟರೆಸ್ಟಿಂಗ್. ಮೊನ್ನೆ ನಿಮ್ಮನ್ನು ಮೊದಲ ಬಾರಿಗೆ ಮಾತನಾಡಿಸಿದೆನಲ್ಲ ಅದಕ್ಕೆ ಇರಬಹುದು. ಐಯಾಮ್ ಸೋ ಸಾರಿ, ನಿಮಗೆ ಮುಂಬಯಿಯಲ್ಲಿ ಗೆಸ್ಟ್ ಹೌಸ್‌ಗಳು ಇರುತ್ತವೆಂಬುದನ್ನೂ ಮರೆತು ಹೋಟೆಲ್ ತಾಜ್‌ನಲ್ಲಿ ಸ್ಟೇ ಮಾಡಬಹುದೆಂದು ಅಡ್ವೈಸ್ ಮಾಡಿದ್ದೆ. ಇರಲಿ ನಿಮಗೆ ಬಿದ್ದ ಕನಸಿನ ಬಗ್ಗೆ ನನಗೂ ಹೇಳಬಹುದಾ ?' ಎಂದು ಕುತೂಹಲದಿಂದ ಕಣ್ಣರಳಿಸಿದ್ದಳು. 'ಹೌದು, ಅದನ್ನು ಹೇಳಲೆಂದೇ ನಿಮಗೆ ಬಿಡುವಿದ್ದರೆ ಬರಲು ಹೇಳಿದ್ದು. ವಿಮಾನದ ಕಾಕ್ಪಿಟ್‌ನಲ್ಲಿ ಕ್ಯಾಪ್ಟನ್ ಆಗಿದ್ದ ನಿಮ್ಮೊಂದಿಗೆ ನಾನೂ ಅಸಿಸ್ಟೆಂಟ್ ಪೈಲಟ್ ಆಗಿ ಕುಳಿತಿದ್ದೆ. ಎಂಜಿನ್ ಸ್ಟಾರ್ಟ್ ಮಾಡಲು ನೀವು ನನಗೆ ಹೇಳಿದ್ದರಿಂದ ಸ್ಟಾರ್ಟ್ ಮಾಡಿದ್ದೆ. ವಿಮಾನ ಟೇಕಾಫ್ ಆಗಿ ಅರ್ಧ ಗಂಟೆ ಆಗಿರಬೇಕು, ವಿಮಾನ ತುಂಬಾ ಎತ್ತರದಲ್ಲಿ ಹಾರುತ್ತಿತ್ತು. ಕ್ಯಾಬಿನ್‌ನಲ್ಲಿ ಗಗನಸಖಿಯರು ಪ್ರಯಾಣಿಕರಿಗೆ ತಿಂಡಿ, ಪಾನೀಯಗಳನ್ನು ವಿತರಿಸಲು ಪ್ರಾರಂಭಿಸಿದ್ದರು. ನಾವಿಬ್ಬರು ಹಳೆಯ ಹಿಂದಿ ಹಾಡುಗಳನ್ನು ಕೇಳುತ್ತಾ ಒಳ್ಳೆಯ ಲಹರಿಯಲ್ಲಿದ್ದೆವು. ಆಗ ವಿಮಾನದ ಎಂಜಿನ್ ಇದ್ದಕ್ಕಿದ್ದಂತೆ ಆಫ್ ಆಗಿತ್ತು. ನೀವು ಫ್ಲೈಟ್ ಕಂಟ್ರೋಲ್ ಮಾಡಲು ಹರಸಾಹಸ ಮಾಡುತ್ತಿದ್ದಿರಿ. ಆದರೆ ಅದಾಗಲೇ ವಿಮಾನ ಗಿರಕಿ ಹೊಡೆಯಲು ಪ್ರಾರಂಭಿಸಿತ್ತು. ಏರ್ ಟ್ರಾಫಿಕ್ ಕಂಟ್ರೋಲ್ ಸಂಪರ್ಕ ಕೂಡ ಕಡಿದುಹೋಗಿತ್ತು. ಪ್ರಯಾಣಿಕರು ಇನ್ನಿಲ್ಲದಂತೆ ಚೀರಾಡುತ್ತಿದ್ದರು. ಕಡೆಗೆ ವಿಮಾನ ಒಂದು ಬೆಟ್ಟದ ಬುಡಕ್ಕೆ ಅಪ್ಪಳಿಸಿತ್ತು. ಕೂಡಲೇ ವಿಮಾನ ಪೂರ್ತಿ ಬೆಂಕಿ ಆವರಿಸಿ ಧಗಧಗ ಉರಿಯತೊಡಗಿತು. ವಿಮಾನದೊಳಗಿಂದ ಸುಟ್ಟ ದೇಹಗಳು ಹೊರಕ್ಕೆ ಕೆಂಡಗಳಂತೆ ಸಿಡಿಯುತ್ತಿದ್ದವು. ಅತ್ಯಂತ ಆಶ್ಚರ್ಯಕರವಾದ ಸಂಗತಿಯೆಂದರೆ ವಿಮಾನದಿಂದ ಅನತಿ ದೂರದಲ್ಲಿ ನಿಂತು ಈ ಅಪಘಾತದ ದೃಶ್ಯಗಳನ್ನು ಭಯದಿಂದ ನೋಡುತ್ತಿದ್ದೆ ನಾನು. ಅಪಘಾತ ನಡೆಯುವಾಗ ವಿಮಾನದಲ್ಲಿದ್ದರೂ, ಅದು ಹತ್ತಿ ಉರಿಯುವಾಗ ಹೇಗೆ ಹೊರಗೆ ಬಂದೆ ಎಂದು ವಿಪರೀತ ಅಚ್ಚರಿ ಭಯಗಳಿಂದ ನಡುಗುತ್ತಿದ್ದವನು ಎಚ್ಚರಗೊಂಡು ಹಾಸಿಗೆಯ ಮೇಲೆ ಕುಳಿತು ಇನ್ನಿಲ್ಲದಷ್ಟು ಬೆವರಿದ್ದೆ. ಫ್ರಿಡ್ಜ್‌ನಿಂದ ಸ್ಪೆಷಲ್ ಮ್ಯಾಂಗೊ ಜ್ಯೂಸ್ ತೆಗೆದು ಕುಡಿದಿದ್ದೆ. ಆಗ ನನ್ನ ಬ್ಲಡ್ ಶುಗರ್ ಲೆವೆಲ್ ನಲವತ್ತು ಪಾಯಿಂಟ್ಸ್‌ಗೆ ಇಳಿದಿತ್ತು.